ಶ್ರೀ ಆರ್. ಎಂ. ಪಾಟೀಲ್.—ವಿಧಾನಸಭೆಯ ಸದಸ್ಯರುಗಳು ಕೇಳುತ್ತಿದ್ದಾರೆ, ಆದರೆ ಆಫರಿಗಿಂತಲೂ ಅರ್ಜಿನ್ನು ಇರುವವರು ಕೇಳಿದರೆ ಅದರಲ್ಲಿ ಯಾರ ಅರ್ಜಿನ್ನು ಎಷ್ಟರಮಟ್ಟಿಗೆ ಇದೆ ಯಂಬುದನ್ನು ನೋಡಿಕೊಂಡು ನಾವು ಅದನ್ನ ವಿಚಾರ ಮಾಡಿ ಕೊಡುತ್ತೇವೆ.

ಶ್ರೀ ನಂಜೀವನಾಥ ಐಕಳ.—ಮಂತ್ರಿಗಳಿಗೆ ಸರ್ಕಾರದವರು ಸ್ಕೂಟರನ್ನು ಕೊಟ್ಟರೆ ಅವರು ಅದನ್ನು ಉಪಯೋಗ ಮಾಡುತ್ತಾರೆಯೇ ?

ಶ್ರೀ ಆರ್. ಎಂ. ಪಾಟೀಲ್.—ಮಂತ್ರಿಗಳು ಅದನ್ನು ಉಪಯೋಗ ಮಾಡದೇ ಇದ್ದರೂ ಮಂತ್ರಿಗಳನ್ನು ಆವಲಂಬನೆ ಮಾಡಿಕೊಂಡಿರುವವರು ಅದನ್ನು ಉಪಯೋಗ ಮಾಡುತ್ತಾರೆ.

ಶ್ರೀ ಗೋಪಾಲಸಾರೆನ್ನ.—ಕಾರ ಮತ್ತು ಸ್ಕೂಟರುಗಳನ್ನು ಜನಗಳಿಗೆ ಹಂಚುವಾಗ ಸರ್ಕಾರದವರು ನಿರ್ದಿಷ್ಟವಾಗಿ ಅನುಸರಿಸುವ ನೀತಿನಿಯಮಗಳೇನು ?

ಶ್ರೀ ಆರ್. ಎಂ. ಪಾಟೀಲ್.—ಈ ಪ್ರಶ್ನೆಯಲ್ಲಿ (d) ಪ್ರಶ್ನೆಗೆ ಕೊಟ್ಟಿರುವ ಉತ್ತರವನ್ನು ನೋಡಿದರೆ ಅದು ಮಾನ್ಯ ಸದಸ್ಯರಿಗೆ ಗೊತ್ತಾಗುತ್ತದೆ.

ಶ್ರೀ ಸಿದ್ದಯ್ಯ ಕಾಶೀಮಠ.—ಧಾರವಾಡ ಜಿಲ್ಲೆಯವರು ಕಾರು ಮತ್ತು ಸ್ಕೂಟರುಗಳಿಗಾಗಿ ಸಾಕಷ್ಟು ಅರ್ಜಿಗಳನ್ನು ಹಾಕಿಕೊಂಡಿದ್ದರೂ ಕೂಡ ಆ ಪ್ರದೇಶಕ್ಕೆ ಬಹಳ ಕಡಿಮೆ ಕೊಟ್ಟಿದ್ದೀರಿ, ಮತ್ತು ವಿಧಾನಸಭೆಯ ಸದಸ್ಯರಿಗೆ ಒಬ್ಬರಿಗೂ ಕೊಟ್ಟಿಲ್ಲ. ಈಗಲಾದರೂ ಇನ್ನು ಮುಂದೆ ಅವರ ಅರ್ಜಿಗಳನ್ನು ಕಟ್ಟಿಸಿದರ್ ಮಾಡುತ್ತೀರಾ ?

ಶ್ರೀ ಆರ್. ಎಂ. ಪಾಟೀಲ್.—ಧಾರವಾಡ ಜಿಲ್ಲೆ ಒಂದಕ್ಕೇ ಅಲ್ಲ. ಎಲ್ಲಾ ಜಿಲ್ಲೆಗಳಿಗೂ ಕೊಡಬೇಕು. ನಿಜ. ಆದರೆ ನಮಗೆ ಬರುವಂತಹ ಕೋಟ ಬಹಳ ಕಡಿಮೆ ಇರುವುದರಿಂದ ಎಲ್ಲರಿಗೂ ಅದನ್ನು ಪೂರೈಕೆ ಮಾಡುವುದು ಬಹಳ ಕಷ್ಟವಾಗುತ್ತದೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಈ ವಿಧಾನಸಭೆಯ ಸದಸ್ಯರಲ್ಲಿ ಕಾಂಗ್ರೆಸ್ ಸದಸ್ಯರಿಗೇ ಹೆಚ್ಚು ಸ್ಕೂಟರನ್ನು ಒದಗಿಸಿದ್ದೀರಿ ಅದಕ್ಕೆ ಕಾರಣವೇನು ?

ಶ್ರೀ ಆರ್. ಎಂ. ಪಾಟೀಲ್.—ಈ ವಿಧಾನ ಸಭೆಯಲ್ಲಿ ಕಾಂಗ್ರೆಸ್ ಸದಸ್ಯರು ಹೆಚ್ಚು ಜನ ಇದ್ದಾರೆ. ಆದ್ದರಿಂದ ಅವರಿಗೆ ಹೆಚ್ಚಿಗೆ ಕೊಡಬೇಕಾಗುತ್ತದೆ.

Issue of Stainless Steel Quotas in the State.

*Q.—563. Sri J. SREENIVASA REDDY (Uttarahally).—

Will the Government be pleased to state :—

(*a*) the number of persons to whom stainless steel quotas for the manufacture of utensils have been issued in the State during the last two years;

(*b*) the departmental checks conducted to prevent black-marketing of the above material;

(*c*) the number of black-marketeers so far been detected and the action taken on them ?

A.—Sri K. MALLAPPA (Minister for Industries and Commerce).—

(*a*) 90.

(*b*) The stainless steel sheets are allotted under Barter Imports to the S.S.I. units that are actually using them for manufacture of utensils. Complaints received regarding misuse of the materials allotted are enquired into by the Officers of the Department of Industries and Commerce or the Assistant Director of Industries and Commerce (Investigation) and through Special Police Establishment. If misuse is reported, the material sanctioned will be cancelled.

(c) 18. Further allotment of quota to these units has been discontinued.

ಶ್ರೀ ಜೆ. ಶ್ರೀನಿವಾಸ ರೆಡ್ಡಿ.—ಸ್ವಾಮಿ, ನನ್ನ ಪ್ರಶ್ನೆಗೆ ಉತ್ತರವಾಗಿ 18 ಯೂನಿಟ್ಸುಗಳಿಗೆ ಇನ್ನು ಮುಂದೆ ಗೊತ್ತುಮಾಡಿಕೊಡುವ ಕೋಟಾವನ್ನು ನಿಲ್ಲಿಸಲಾಗಿದೆ ಎಂದು ಹೇಳಿದ್ದೀರಿ, ಯಾವ ಯಾವ ಕಾರಣಕ್ಕಾಗಿ ಅವರಿಗೆ ಕೋಟಾವನ್ನ ನಿಲ್ಲಿಸಿದ್ದೀರಿ ?

ಶ್ರೀ ಕೆ. ಮಲ್ಲಪ್ಪ.—ಅವರು ತಮಗೆ ಕೊಟ್ಟಂತಹ ಸ್ಟೈನ್‌ಲೆಸ್‌ಸ್ಟೀಲನ್ನು ಕೋಟಾವನ್ನ ಸರಿಯಾಗಿ ಉಪಯೋಗ ಮಾಡಿಲ್ಲ. ಅವರು ಅದನ್ನು ಬ್ಲ್ಯಾಕ್ ಮಾರ್ಕೆಟ್ಟಿನಲ್ಲಿ ಮಾರಾಟ ಮಾಡಿದ್ದಾರೆ ಎನ್ನುವ ಆಧಾರದಮೇಲೆ ಅವರಿಗೆ ಕೊಟ್ಟಿದ್ದಂತಹ ಸ್ಟೈನ್‌ಲೆಸ್ ಸ್ಟೀಲನ್ನು ಕೊಡತಕ್ಕ ಕೋಟದ ಲೈಸೆನ್ಸನ್ನು ಕ್ಯಾನ್ಸರ್ ಮಾಡಿದ್ದೇವೆ.

ಶ್ರೀ ಜೆ. ಶ್ರೀನಿವಾಸ ರೆಡ್ಡಿ.—ನಮ್ಮ ದೇಶಕ್ಕೆ ಒಟ್ಟು ಬರತಕ್ಕ ಸ್ಟೈನ್‌ಲೆಸ್ ಸ್ಟೀಲನ ಕೋಟ ಎಷ್ಟು ?

ಶ್ರೀ ಕೆ. ಮಲ್ಲಪ್ಪ.—1964ನೇ ಇಸವಿಯಲ್ಲಿ ಸೆಪ್ಟೆಂಬರ್ ತಿಂಗಳವರೆಗೆ ನಮ್ಮ ರಾಜ್ಯಕ್ಕೆ 234 ಟನ್ ಸ್ಟೈನ್‌ಲೆಸ್ ಸ್ಟೀಲ್ ಕೋಟಾ ಬಂದಿದೆ.

Sri G. V. GOWDA.—After the allotment, may I know whether there is any machinery to verify whether those stainless steel sheets are used for manufacturing and whether the finished goods have been varified ?

Sri K. MALLAPPA.—We have the machinery.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಇಷ್ಟರವರೆಗೂ ತಾವು ಕೊಟ್ಟಿರತಕ್ಕ ಕೋಟಾದಲ್ಲಿ, ಆ ಕೋಟಾವನ್ನು ದುರುಪಯೋಗಮಾಡಿಕೊಂಡ ಕೇಸುಗಳು ಎಷ್ಟು ಬಂದಿವೆ, ಆ ಪೈಕಿ ಎಷ್ಟು ಕೇಸುಗಳ ಬಗ್ಗೆ ತಾವು ಕ್ರಮವನ್ನು ತೆಗೆದುಕೊಂಡಿದ್ದೀರಿ ?

ಶ್ರೀ ಕೆ. ಮಲ್ಲಪ್ಪ.—18 ಕೇಸುಗಳು ರುಜುವಾತು ಆಗಿವೆ. ಆ 18 ಜನಗಳಿಗೂ ಕೋಟಾ ಕೊಡತಕ್ಕದ್ದನ್ನು ಮನ್ನಾ ಮಾಡಿದ್ದೇವೆ.

ಶ್ರೀ ಎಸ್. ಸುಬ್ಬಯ್ಯ ನಾಯಕ್.—ಈಗ ಕಳೆದ ಎರಡು ವರ್ಷಗಳಿಂದಲೂ ರಾಜ್ಯದಲ್ಲಿ ಪಾತ್ರೆಗಳನ್ನ ತಯಾರಿಸುವುದಕ್ಕಾಗಿ ಸ್ಟೈನ್‌ಲೆಸ್ ಸ್ಟೀಲನ ಕೋಟಾವನ್ನು ಕೊಡಲಾಗಿರುವ ವ್ಯಕ್ತಿಗಳ ಸಂಖ್ಯೆ 90 ಎಂದು ಹೇಳಿದ್ದೀರಿ, ಆ 90 ವ್ಯಕ್ತಿಗಳೂ ಬೆಂಗಳೂರಿನಲ್ಲಿ ಮಾತ್ರ ಇದ್ದಾರೆಯೋ ಅಥವಾ ಈ ರಾಜ್ಯದ ಎಲ್ಲಾ ಭಾಗದಲ್ಲೂ ಇದ್ದಾರೆಯೋ ಹೇಗೆ ಎನ್ನುವ ವಿವರವನ್ನು ಹೇಳುತ್ತೀರಾ ?

ಶ್ರೀ ಕೆ. ಮಲ್ಲಪ್ಪ.—ಸ್ಟೀಲ್ ಕೋಟಾವನ್ನು ಪಡೆದವರು ಬೆಂಗಳೂರಿನಲ್ಲಿಯೇ ಹೆಚ್ಚಾಗಿದ್ದಾರೆ. ರಾಜ್ಯದ ಎಲ್ಲಾ ಭಾಗದಲ್ಲಿಯೂ ಇದ್ದಾರೆ, ರಾಜ್ಯದ ಎಲ್ಲಾ ಭಾಗಗಳಲ್ಲಿಯೂ ಕೋಟಾವನ್ನು ಕೊಡಲಾಗಿದೆ.

ಶ್ರೀ ಬಿ. ಕೆ. ಪುಟ್ಟಯ್ಯ.—ಈ ಸ್ಟೈನ್‌ಲೆಸ್ ಸ್ಟೀಲನ ಕೋಟಾವನ್ನ ಅಲಾಟ್ ಮಾಡುವಾಗ ಎಲ್ಲರಿಗೂ ಒಂದೇ ಸಮನಾಗಿ ಹಂಚುತ್ತೀರೋ ಅಥವಾ ಅವರು ಉಪಯೋಗಮಾಡತಕ್ಕ ರೀತಿಯನ್ನು ಅನುಸರಿಸಿ ಅವರಿಗೆ ಕೋಟಾವನ್ನ ಕೊಡುತ್ತೀರೋ ?

ಶ್ರೀ ಕೆ. ಮಲ್ಲಪ್ಪ.—ಅವರು ಉಪಯೋಗಮಾಡತಕ್ಕ ಕ್ಯಪಾಸಿಟಿಯನ್ನು ಅನುಸರಿಸಿ ಅವರಿಗೆ ನಾವು ಸ್ಟೈನ್‌ಲೆಸ್ ಸ್ಟೀಲನ್ನು ಹಂಚುತ್ತೇವೆ.

ಶ್ರೀ ಕೆ. ಪಿ. ರೇವಣ ಸಿದ್ದಪ್ಪ.—ಬೆಂಗಳೂರಿನಲ್ಲಿಯೇ ಹೆಚ್ಚು ಕೋಟಾವನ್ನು ಕೊಡುವುದರಿಂದ ಇಲ್ಲಿ ತಪ್ಪು ಮಾಡುವುದಕ್ಕೆ ಸುಲಭವಾಗುತ್ತದೆ. ಆದ್ದರಿಂದ ತಾಲ್ಲೂಕು ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಈ ಕೈಗಾರಿಕೆಯನ್ನು ಮಾಡುವುದಕ್ಕೆ ಹೆಚ್ಚಿಗೆ ಪ್ರೋತ್ಸಾಹವನ್ನು ಕೊಟ್ಟು, ಆ ಪಾತ್ರೆಗಳನ್ನ ಇಷ್ಟೇ ಬೆಲೆಗೆ ಮಾರಾಟಮಾಡಬೇಕೆಂದು ಅದರ ಬೆಲೆಯನ್ನ ನಿಗದಿ ಮಾಡುವುದಾದರೆ ಸ್ಟೈನ್‌ಲೆಸ್ ಸ್ಟೀಲನ ದುರುಪಯೋಗ ಕಡಿಮೆಯಾಗುವುದಿಲ್ಲವೇ ?

ಶ್ರೀ ಕೆ. ಮಲ್ಲಪ್ಪ.—ಎಲ್ಲೆಲ್ಲ ಈ ಕೈಗಾರಿಕೆಗಳು ಸ್ಥಾಪನೆಯಾಗಿದೆಯೋ ಅಲ್ಲೆಲ್ಲಾ ಅದಕ್ಕೆ ಪ್ರೋತ್ಸಾಹವನ್ನು ಕೊಡುತ್ತೇವೆ. ಗ್ರಾಮಾಂತರ ಪ್ರದೇಶದಲ್ಲಿಯೂ ಈ ಕೈಗಾರಿಕೆಗೆ ಪ್ರೋತ್ಸಾಹವನ್ನು ಕೊಡುತ್ತೇವೆ. ಈ ಕೈಗಾರಿಕೆಗಳು ಬೆಂಗಳೂರಿನಲ್ಲಿ ಹೆಚ್ಚಿಗೆ ಪ್ರಾರಂಭ ಆಗಿವೆ. ಆದ್ದರಿಂದ ಇಲ್ಲಿ ಈ ಕೈಗಾರಿಕೆಗಳಿಗೆ ಪ್ರೋತ್ಸಾಹವನ್ನು ಕೊಡುತ್ತಿದ್ದೇವೆ.

ಶ್ರೀ ಜಿ. ರಾಮೇಗೌಡ.—ಸ್ಟೈನ್‌ಲೆಸ್ ಸ್ಟೀಲನ ಕೋಟಾವನ್ನು ಯಾರು ದುರುಪಯೋಗ ಮಾಡಿಕೊಂಡಿದ್ದಾರೆಯೋ ಅಂಥವರಿಗೆ ಕೊಡತಕ್ಕ ಕೋಟಾವನ್ನು ನಿಲ್ಲಿಸಿದ್ದೇವೆ ಎಂದು ಹೇಳಿದಿರಿ, ಅವರ ಮೇಲೆ ಪ್ರಾಸಿಕ್ಯೂಷನ್ ಕ್ರಮವನ್ನು ಏತಕ್ಕೆ ತೆಗೆದುಕೊಳ್ಳಲಿಲ್ಲ ?

ಶ್ರೀ ಕೆ. ಮಲ್ಲಪ್ಪ.—ಅವರಿಗೆ ಕೊಡತಕ್ಕ ಸ್ಟೀಲ್ ಕೋಟಾವನ್ನು ನಿಲ್ಲಿಸುವುದರಿಂದ ಅವರಿಗೆ ಒಂದು ಪರಿಣಾಮಕಾರಿಯಾದ ಶಿಕ್ಷೆಯಾಗುತ್ತದೆ ಎಂದು ಆ ವ್ಯವಸ್ಥೆಯನ್ನು ಮಾಡಿದೆ. ಸಾಮಾನ್ಯವಾಗಿ ಅವರಿಗೆ ಕೊಡುತ್ತಿದ್ದಂತಹ 5 ಸಾವಿರ 10 ಸಾವಿರ ರೂಪಾಯಿಗಳ ಸ್ಟೈನ್‌ಲೆಸ್ ಸ್ಟೀಲಿನ ಕೋಟಾವನ್ನು ಅವರು ಮಾರಾಟ ಮಾಡುವುದರಿಂದ ಅವರಿಗೆ ಏನೊಂದು ಲಾಭ ಬರುತ್ತಿತ್ತೋ ಅದು ಈಗ ನಿಂತು ಹೋಗಿದೆ. That will be an effective punishment. We consider that refusing quota is much more effective than prosecuting ಯಾರು ಅವರನ್ನು ಪ್ರಾಸಿಕ್ಯೂಟ್ ಮಾಡುತ್ತಾರೆಯೋ ಅಂಥವರಮೇಲೆಯೇ ರುಜುವಾತಿನ ಜವಾಬ್ದಾರಿ ಇರುತ್ತದೆ. ಅದು ಕೋರ್ಟಿಗೆ ಹೋದರೆ ಬಹಳ ಕಷ್ಟವಾಗುತ್ತದೆ. ಕೋರ್ಟಿನಲ್ಲಿ ಒಂದು ವೇಳೆ ಆ ಕೇಸು ನಿಲ್ಲದೆ ಹೋದರೆ ಸ್ಟೀಲ್ ಕೋಟಾವನ್ನ ಮತ್ತೆ ಅವರಿಗೆ ಕೊಡಬೇಕಾಗುತ್ತದೆ. ಅದಕ್ಕೋಸ್ಕರ ಈಗ ನಾವು ಅವರಿಗೆ ಕೋಟಾ ನಿಲ್ಲಿಸಿರುವುದೇ ಸರಿಯಾಗಿದೆ.

ಶ್ರೀ ಪಿ. ವೆಂಕಟಗಿರಿಯಪ್ಪ.—ಕೆಲವು ಅಧಿಕಾರಿಗಳು ಕೆಲವು ಖಾಸಗೀ ವ್ಯಕ್ತಿಗಳ ಜೊತೆಯಲ್ಲಿ ಸೇರಿಕೊಳ್ಳುವುದರಿಂದ ಈ ರೀತಿ ಆ ಕೋಟ ದುರುಪಯೋಗವಾಗುವುದಕ್ಕೆ ಕಾರಣವಾಗಿದೆ ಅಲ್ಲವೇ ?

ಶ್ರೀ ಕೆ. ಮಲ್ಲಪ್ಪ.—ಅವರಿಗೆ ಅಧಿಕಾರಿಗಳ ನೆರವು ಬೇಕೆಂದೇನು ಇಲ್ಲ. ಅಧಿಕಾರಿಗಳ ನೆರವು ಇಲ್ಲದೆ ಖಾಸಗಿ ವ್ಯಕ್ತಿಗಳು ಬ್ಲಾಕ್ ಮಾರ್ಕೆಟ್ ಮಾಡುತ್ತಾರೆ. ಎಲ್ಲೆಲ್ಲಿ ಅದು ಬ್ಲಾಕ್ ಮಾರ್ಕೆಟ್ ನಡೆಯುತ್ತದೆ ಎಂದು ಗೊತ್ತಾಗಿದೆಯೋ ಅಂಥಾ ಕಡೆ action ತೆಗೆದುಕೊಂಡು ಅದಕ್ಕೆ ಸಂಬಂಧ ಪಟ್ಟವರಿಗೆ ಇನ್ನು ಮುಂದೆ ಕೊಡತಕ್ಕ ಕೋಟಾವನ್ನು ಮುನ್ನಾ ಮಾಡಿದ್ದೇವೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ನಂಸ್ಥಾನಾಮಳೆ ಯಾರು ಯಾರಿಗೆ ಎಷ್ಟೆಷ್ಟು ಸ್ಟೈನ್‌ಲೆಸ್ ಸ್ಟೀಲಿನ ಕೋಟಾವನ್ನು ಕೊಡುತ್ತಿದ್ದೀರಿ ಎಂಬ ವಿವರಗಳನ್ನೊಳಗೊಂಡ ಒಂದು ಲಿಸ್ಟನ್ನು ಈ ಸಭೆಯ ಮೇಜಿನಮೇಲೆ ಇಡುತ್ತೀರಾ ?

ಶ್ರೀ ಕೆ. ಮಲ್ಲಪ್ಪ.—ಅಪೇಕ್ಷೆ ಪಟ್ಟರೆ ಇಡಬಹುದು.

9-00 A.M.

ಶ್ರೀ ಬಿ. ಚನ್ನಬ್ಯೆರೆಗೌಡ.—ಈ ಕೋಟ ಹಂಚಿಕೆ ಮಾಡುವಾಗ, ತಾರತಮ್ಯ ತೋರಿಸುತ್ತಾರೆ ಎಂದು ಹೈಕೋರ್ಟಿಗೆ ರಿಟ್ ಹೋಗಿ ಆ ಬಗ್ಗೆ ಏನು ತೀರ್ಮಾನವಾಯಿತು ?

ಶ್ರೀ ಕೆ. ಮಲ್ಲಪ್ಪ.— ಈ ಹಂಚಿಕೆ ಮಾಡುವುದನ್ನು ಪರಿಶೀಲನೆ ಮಾಡಬೇಕು ಎಂದು ಒಂದು ಸಮಿತಿ ಏರ್ಪಾಡು ಮಾಡಿದ್ದೆವು. ಆದರೆ ಅಂಥ ಸಮಿತಿ ಏರ್ಪಾಡಾಗಿರತಕ್ಕಂಥಾದ್ದು ನರಿಯಲ್ಲ. ಏಕೆಂದರೆ ಇದು ನಮ್ಮ ರಾಜ್ಯ ಸರ್ಕಾರದ ಕೆಲಸವಲ್ಲ ; ಇದು ಕೇಂದ್ರ ಸರ್ಕಾರದ ಜವಾಬ್ದಾರಿ ; ಇದನ್ನು ಅವರ ಅಧಿಕಾರಿಗಳಿಗೆ ಕೊಟ್ಟಿದ್ದಾರೆ. ಕೇಂದ್ರ ಸರ್ಕಾರದವರು ಜವಾಬ್ದಾರಿಯುತರು ; ಆದ್ದರಿಂದ ರಾಜ್ಯಸರ್ಕಾರ ಕೈಹಾಕಬಾರದು. ಎಂಬುದಾಗಿ ಹೈಕೋರ್ಟಿನವರು ನಿರ್ದೇಶನ ಕೊಟ್ಟರು. ಆ ಪ್ರಕಾರ ಸಮಿತಿಯನ್ನು ರದ್ದು ಮಾಡಿರುತ್ತೇವೆ.

ಶ್ರೀ ಬಿ. ಕೆ. ಪುಟ್ಟಯ್ಯ.—ಈ ಕೋಟ ಕೊಟ್ಟಿರುವವರ ಪೈಕಿ ಎಷ್ಟು ಜನ ಇನ್‌ಕಂ ಟ್ಯಾಕ್ಸ್ ಕೊಡುತ್ತಾರಾ ?

ಶ್ರೀ ಕೆ. ಮಲ್ಲಪ್ಪ.—ಆ ಪಟ್ಟಿನ್ನಲ್ಲಿಲ್ಲ. ಪ್ರತ್ಯೇಕ ಪ್ರಶ್ನೆ ಕಳುಹಿಸಿದರೆ, ಸಂಗ್ರಹಿಸಿ ಕೊಡಬಹುದು.

ಶ್ರೀ ಗೋಪಾಲಸ್ವಾಮಿ.—ತಾವು ಹೇಳಿದಿರಿ, ಬೆಂಗಳೂರು ಕೈಗಾರಿಕೆಯಲ್ಲಿ ಬೆಳೆಯುತ್ತಿದೆ. ಹೆಚ್ಚಾಗಿ ಕೋಟ ಕೊಡುವ ದೃಷ್ಟಿಯಿಂದ ಕೈಗಾರಿಕೆ ಸಹಕಾರ ಸಂಘಗಳನ್ನು ಮಾಡಿ, ಅಂಥ ಸಹಕಾರ ಸಂಘಗಳಿಗೆ ಕೋಟ ಕೊಡುವ ಹಾಗೆ ಏರ್ಪಾಡು ಮಾಡುತ್ತೀರ ?

ಶ್ರೀ ಕೆ. ಮಲ್ಲಪ್ಪ.—ಸ್ಟೇನ್ ಸ್ಟೀಲ್‌ನ ಮೂಲವಸ್ತು ಪರದೇಶದಿಂದ ಬರತಕ್ಕಂಥಾದ್ದು. ಆದ್ದರಿಂದ ಹೊಸದಾಗಿ ಕೈಗಾರಿಕೆ ತೆರೆದು ಕೊಡುವುದಕ್ಕಾಗುವುದಿಲ್ಲ. ಇರತಕ್ಕಂಥ ಕೈಗಾರಿಕೆಯನ್ನು ಪೂರ್ತಿಕೆ ಮಾಡುವುದೇ ಕಷ್ಟವಾಗಿದೆ. ಆದ್ದರಿಂದ ಹೊಸ ಕೈಗಾರಿಕೆಗಳನ್ನು ರಚನೆ ಮಾಡಬಾರದು, ಸ್ಟೇನ್‌ಲೆಸ್ ಸ್ಟೀಲ್ ಕೊಡಬಾರದೆಂದು ಇಂಡಿಯ ಸರ್ಕಾರದವರ ಆಜ್ಞೆ ಇದೆ. ಆದರೆ ನಮ್ಮ ದೇಶದಲ್ಲಿ ಅನೇಕ ವಸ್ತುಗಳಿವೆ. ಅವನ್ನು ಬಳಸಿಕೊಂಡು, ಕೈಗಾರಿಕೆಗಳನ್ನು ಸ್ಥಾಪನೆ ಮಾಡಬಹುದು. ಅವರಿಗೆ ತಕ್ಕ ಪ್ರೋತ್ಸಾಹ ಸರ್ಕಾರ ಕೊಡಲಿಕ್ಕೆ ತಯಾರಿದೆ.

ಶ್ರೀಮತಿ ಸುಶೀಲಾಬಾಯಿ ಹಿರಾಚಂದ್ ಶಾ.—ಮೈಸೂರು ರಾಜ್ಯಕ್ಕೆ ಸ್ಟೇನ್‌ಲೆಸ್ ಸ್ಟೀಲ್ ಕೋಟ ಬಹಳ ಕಡಿಮೆ. ಆದರೂ ದೊಡ್ಡ ದೊಡ್ಡ ವ್ಯಾಪಾರಿಗಳಿಗೆ ಒಮ್ಮೆಗೇ 20-30 ಟನ್ ಕೊಡುತ್ತಾನೆ. ಸಣ್ಣ ಸಣ್ಣ ಕೈಗಾರಿಕೆ ನಡೆಸುವವರಿಗೆ ಹೆಚ್ಚು ಕೋಟ ಕೊಟ್ಟರೆ ಅವರು ಜೀವನ ನಡೆಸುವುದಕ್ಕೆ ಸಾಧ್ಯವಾಗುತ್ತದೆ. ಹೀಗೆ ಮಾಡುತ್ತೀರ ?

ಶ್ರೀ ಕೆ. ಮಲ್ಲಪ್ಪ.—ಬರತಕ್ಕಂಥಾದ್ದನ್ನು ದೊಡ್ಡ ದೊಡ್ಡ ಕೈಗಾರಿಕೆಗಳಿಗೆ ಕೊಡುವುದಿಲ್ಲ. ಸಣ್ಣ ಕೈಗಾರಿಕೆಗಳನ್ನಿಟ್ಟುಕೊಂಡು ಯಾರು ಪಾತ್ರೆಗಳನ್ನು ತಯಾರಿಸುತ್ತಾರೊ, ಅಂಥವರಿಗೆ ಕೊಡುತ್ತಿದ್ದಾರೆ. 30 ಟನ್ ಕೊಡುವುಕ್ಕಾಗುವುದಿಲ್ಲ. 234 ಟನ್ ವನ್ನು ಇರತಕ್ಕಂಥಾದ್ದು; ನಮಗೆ ಸಾಧಾರಣವಾಗಿ ನೂರಾರು ಅಪ್ಲಿಕೇಷನ್ನುಗಳಿರುತ್ತವೆ. ಟನ್‌ಗಟ್ಟಲೆ ಕೊಡುವುವಕ್ಕೆ ಸಾಧ್ಯವಾಗುವುದಿಲ್ಲ. ಅವರ ಯೋಗ್ಯತೆಗೆ ಅಂದರೆ ಯಾವ ಪ್ರಮಾಣದಲ್ಲಿ ತಯಾರು ಮಾಡುವುದಕ್ಕೆ ಶಕ್ತಿ ಇದೆಯೋ ಅದಕ್ಕೆ ಅನುಗುಣವಾಗಿ ಹಂಚಲಾಗುತ್ತಾ ಇದೆ.

ಶ್ರೀ ಡಿ. ಮುನಿಚಿನ್ನಪ್ಪ.—ಈ ಸ್ಟೇನ್‌ಲೆಸ್ ಸ್ಟೀಲ್ ಕೋಟಾವನ್ನು ಬೊಂಬಾಯಿ, ಕಲ್ಕತ್ತ ಮತ್ತು ಉತ್ತರ ಪ್ರದೇಶಗಳಿಂದ ಬಂದಂಥವರಿಗೆ ಕೊಡುತ್ತಾ ಇದ್ದಾರೆ. ಆದರೆ ನಮ್ಮ ರಾಜ್ಯದಲ್ಲರುವ ಸಣ್ಣ ಕೈಗಾರಿಕೆಗಳಿಗೆ ಕೊಡುವುದಕ್ಕೆ ಸರ್ಕಾರ ಸಹಾಯ ಮಾಡಿದೆಯೆ ?

ಶ್ರೀ ಕೆ. ಮಲ್ಲಪ್ಪ.—ಉತ್ತರ ದೇಶದಿಂದ ಬಂದವರು ಯಾರು, ದಕ್ಷಿಣ ದೇಶದಿಂದ ಬಂದವರು ಯಾರು ಎಂಬುದರ ಬಗ್ಗೆ ಅಲಾಯಿದ ಪಟ್ಟಿ ಇಲ್ಲ. ಯಾರ್ಯಾರು ದೇಶದಲ್ಲಿ ಕೈಗಾರಿಕೆ ಸ್ಥಾಪನೆ ಮಾಡಿದ್ದಾರೋ, ಅವರಿಗೆ ನಮಗೆ ಸಿಗುವಷ್ಟನ್ನು, ದೊರೆಯುವಷ್ಟನ್ನು, ಸಮನಾದ ರೀತಿಯಲ್ಲಿ ಹಂಚಲಾಗುತ್ತಿದೆ.

ಶ್ರೀ ಜಿ. ರಾಮೇಗೌಡ.—ಈ ಸಾಲಿನಲ್ಲಿ ಈ ಮಾನ್ಯ ಸಭೆಯ ಸದಸ್ಯರೊಬ್ಬರ ಮಗನ ಹೆಸರಿನಲ್ಲಿ ಕೋಟ ಪರ್ಮಿಟ್ ಕೊಟ್ಟಿದ್ದನ್ನು ಪೂರ್ತಿ ಬ್ಲಾಕ್-ಮಾರ್ಕೆಟ್ಟಿನಲ್ಲಿ ಮಾರಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

Mr. SPEAKER.—Every one of these Questions have been asked on the Floor of this House during the last 15 days.

ಶ್ರೀ ಕೆ. ಎಚ್. ರಂಗನಾಥ್—ಈ 18 ಬ್ಲಾಕ್-ಮಾರ್ಕೆಟ್ ಕೇಸುಗಳಲ್ಲಿ, ಅಪರಾಧಿಗಳು ಬೆಂಗಳೂರಿನವರೆ, ಮತ್ತು ಅವರು ಎಷ್ಟು ವರ್ಷದಿಂದ ಈ ವನ್ನು ವನ್ನು ಮಿಸ್‌ಯೂಸ್ ಮಾಡುತ್ತಿದ್ದರು?

ಶ್ರೀ ಕೆ. ಮಲ್ಲಪ್ಪ.—ಬೆಂಗಳೂರಿನಲ್ಲಿಯೂ ಇದ್ದಾರೆ. ಪ್ರತ್ಯೇಕ ವಿವರಣೆ ನನ್ನ ಹತ್ತಿರವಿಲ್ಲ. ಬೆಂಗಳೂರಿನವರೂ ಕೆಲವರು ಇದ್ದಾರೆ. ಅವರು ಕೆಲವು ವರ್ಷಗಳಿಂದ ಮಾಡುತ್ತಾ ಇದ್ದಾರೆ.

ಶ್ರೀ ಅಂದಾನಯ್ಯ.—ಈ ಮಾನ್ಯ ಸಭೆಯ ಸದಸ್ಯರೊಬ್ಬರು ಮಕ್ಕಳ ಹೆಸರಿನಲ್ಲಿ ಸ್ಟೇನ್‌ಲೆಸ್ ಸ್ಟೀಲ್ ಪರ್ಮಿಟ್ ತೆಗೆದುಕೊಂಡು, ಪೂರ್ತಿ ಕೋಟವನ್ನು ಬ್ಲ್ಯಾಕ್ ಮಾರ್ಕೆಟ್ಟಿನಲ್ಲಿ ಮಾರಿರ ತಕ್ಕಾಂಥಾದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ?

Mr. SPEAKEK.—Again the same Question.

ಶ್ರೀ ಕೆ. ಮಲ್ಲಪ್ಪ.—ಇಲ್ಲ, ಬಂದಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ತಾವು ಎಷ್ಟೇ ಧೈರ್ಯ ಮಾಡಿದರೂ, ಪಕ್ಷದ ಪ್ರಭಾವಕ್ಕೆ ಈಡಾಗಿ, ಸ್ಟೇನ್‌ಲೆಸ್‌ಸ್ಟೀಲ್ ಕೋಟ ದುರುಪಯೋಗ ಪಡಿಸಿಕೊಂಡವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಹಿಂಜರಿಯುತ್ತಿದ್ದೀರಲ್ಲವೆ ?

ಶ್ರೀ ಕೆ. ಮಲ್ಲಪ್ಪ.—ಇದು ತಪ್ಪು ತಿಳುವಳಿಕೆ. ಯಾರ್ಯಾರು ತಪ್ಪು ಮಾಡುತ್ತಾರೊ, ಅವರ ಮೇಲೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಶ್ರೀ ಸಿದ್ದಯ್ಯ ಕಾಶಿಮಠ.—ಕಳ್ಳಪೇಟೆಗೆ ಈ ವನ್ನು ಹೋಗುತ್ತಿರುವುದರಿಂದ, ಪೇಟೆಯಲ್ಲಿ ಸ್ಟೇನ್‌ಲೆಸ್ ಸ್ಟೀಲ್ ಬೇಲೆ ವಿಪರೀತ ಏರಿರುತ್ತದೆ. ಅದನ್ನು ತಡೆಗಟ್ಟಲು ಯಾವ ತರಹ ಕ್ರಮ ತೆಗೆದುಕೊಳ್ಳುತ್ತೀರ ?

ಶ್ರೀ ಕೆ. ಮಲ್ಲಪ್ಪ.—ರೈಡ್ಸೆನ್ಸ್ ಕ್ಯಾನ್ಸಲ್ ಮಾಡುತ್ತೇವೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ನಮ್ಮ ಸರ್ಕಾರ ಬೆಂಗಳೂರು ಸಿಟಿಯಲ್ಲಿ ಎಷ್ಟು ಜನಕ್ಕೆ ಕೋಟ ಕೊಟ್ಟಿದ್ದಾರೊ, ಅಷ್ಟು ಜನರು ಇಟ್ಟುಕೊಂಡಿರುವ ಕೈಗಾರಿಕೆ ಸ್ಥಳಗಳಿಗೆ ಈ ಮಾನ್ಯ ಸಭೆಯ ಸದಸ್ಯರನ್ನು ಒಂದು ಬಸ್ ಮಾಡಿ ಕರೆದುಕೊಂಡು ಹೋಗಿ, ಅವರಿಗೆ ತೋರಿಸುತ್ತೀರಾ ?

ಶ್ರೀ ಕೆ. ಮಲ್ಲಪ್ಪ.—ತಾವು ಅಪೇಕ್ಷೆಪಡುವುದಾದರೆ ತೋರಿಸೋಣ.

Sri S. SHIVAPPA.—In view of the scarcity existing in stainless steel will the State Government consider the desirability of starting a factory at Bhadravathi along with the special steel now being produced ?

Sri K. MALLAPPA.—That question has been examined. Licenses have already been given for three parties in India to produce stainless steel. We thought it would be much more useful to produce special types of steel rather than stainless steel at Bhadravathi.

ಶ್ರೀ ಜಿ. ವಿ. ಗೌಡ.—ಈ ಸಣ್ಣ ಸಣ್ಣ ಕೈಗಾರಿಕೆಗಳಲ್ಲಿ ನಿರತರಾಗಿರತಕ್ಕ ಜನರು ತಮ್ಮ ಜೀವನಕ್ಕೆ ಇದನ್ನೇ ನಂಬಿಕೊಂಡಿರುತ್ತಾರೆ. ಹಾಗೆ ಈ ಕೈಗಾರಿಕೆಯನ್ನು ಅವಲಂಬಿಸಿಕೊಂಡಿರತಕ್ಕಂಥ ವರಿಗೆ ಹೆಚ್ಚಿನ ರೀತಿಯ ಕೋಟ ಕೊಡಬೇಕೆಂಬ ನೀತಿಯನ್ನು ಒಪ್ಪುತ್ತೀರಾ ?

ಶ್ರೀ ಕೆ. ಮಲ್ಲಪ್ಪ.—ಸಣ್ಣ ಸಣ್ಣ ಕೈಗಾರಿಕೆಗಳಿಗೇ ಕೊಡುತ್ತಿದ್ದೇವೆ ; ಯೂಟೆನ್ಸಿಲ್ಸ್ ತಯಾರು ಮಾಡುತ್ತಿರುವವರಿಗೇ ಕೊಡುತ್ತಿದ್ದೇವೆ.

Sri G. V. GOWDA.—Will special consideration be given to those persons who entirely depend upon small scale industries, using stainless steel, particularly in rural areas ?

Sri K. MALLAPPA.—Certain basic facilities are necessary—whether it is rural or urban area. They have to use raw materials which are imported.

ಶ್ರೀ ಕೆ. ಲಕ್ಕಪ್ಪ.—ಈ ಶಾಸನ ಸಭೆಯ ಸದಸ್ಯರೊಬ್ಬರ ಮಗನು ಕೋಟ ತೆಗೆದುಕೊಂಡು ಅಕ್ರಮವಾಗಿ ಮಾರಾಟ ಮಾಡಿ ಹೆಚ್ಚು ಲಾಭವನ್ನು ಗಳಿಸಿದ ಅಂಶವನ್ನು ತನಿಖೆ ನಡೆಸಿ, ಈ ಸಭೆಯ ಮುಂದೆ ಅಂಶಗಳನ್ನೆಲ್ಲಾ ಇಡುವುದಕ್ಕೆ ಮಂತ್ರಿವರ್ಯರು ಅವಕಾಶ ಮಾಡಿಕೊಡುತ್ತಾರೆಯೇ ?

ಶ್ರೀ ಕೆ. ಮಲ್ಲಪ್ಪ.—ಮಾನ್ಯ ಸದಸ್ಯರು ಹೇಳುವುದು ನಿಜವಲ್ಲ. If particulars are given the matter will be investigated and action taken.

Sri K. P. GADAG.—May I know whether the quota allotted to Mysore State is comparatively less than the allotment to the neighbouring States like Madras ?

Sri K. MALLAPPA.—It depends upon the number of industries and their requirements.

Sri G. V. GOWDA.—Special consideration is shown to persons who are influential and rich. I want to know whether quotas will be allotted to persons in rural areas who entirely depend for employment upon stainless steel ?

Sri K. MALLAPPA.—Distribution rests with the Central Government and not with the State Government. In any case, no discrimination on this ground could be made between a rural and urban area. It is a question of fundamental right.

ಶ್ರೀ ಜಿ. ರಾಮೇಗೌಡ.—ಈ ಸಾಲಿನಲ್ಲಿ ಹೊಸದಾಗಿ ಪರ್ಮಿಟ್ಟುಗಳನ್ನು ಕೊಡತಕ್ಕಂಥ ಏನಾದರೂ ಏರ್ಪಾಡು ಇದೆಯೇ ? ಹಾಗಾದರೆ ಎಷ್ಟು ಟನ್ನುಗಳಷ್ಟು ಹಂಚುತ್ತೀರಿ ?

ಶ್ರೀ ಕೆ. ಮಲ್ಲಪ್ಪ.—ಹೊಸದಾಗಿ ಪರ್ಮಿಟ್ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಫಾರಿನ್ ಎಕ್ಸ್‌ಚೇಂಜ್ ಕಡಿಮೆ ಇರುವುದರಿಂದ, ರಾ ಮಟೀರಿಯಲ್ ಜಾಸ್ತಿ ಇಂಪೋರ್ಟ್ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಹೊಸದಾಗಿ ಅಪ್ಲಿಕೇಶನ್ ಕೊಡತಕ್ಕಂಥಾವರಿಗೆ ಕೋಟ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಕೇಂದ್ರ ಸರ್ಕಾರದವರು ಸ್ಪಷ್ಟೀಕರಿಸಿದ್ದಾರೆ.

ಶ್ರೀ ಜಿ. ದುಗ್ಗಪ್ಪ.—ಸಂಸ್ಥಾನದಲ್ಲಿರುವ ಅಕ್ಕಸಾಲಿಗರು ಕೆಲಸ ಕಾರ್ಯಗಳನ್ನು ಮಾಡುವುದಕ್ಕೆ ಸರಕಾರ ಸೊಸೈಟಿಗೆ 40 ಸಾವಿರ ರೂಪಾಯಿವರೆಗೆ ಕೊಟ್ಟಿದ್ದಾರೆ, ಮತ್ತು ಕೈಗಾರಿಕೆ ಗೋಸ್ಕರವಾಗಿ ಯಂತ್ರೋಪ ಕರಣಗಳನ್ನು ಕೊಟ್ಟಿದ್ದಾರೆ. ಅಂಥ ಸೊಸೈಟಿಗಳಿಗೆ ಈ ಸ್ಟೇನ್‌ಲೆಸ್ ಸ್ಟೀಲೂ ಪರ್ಮಿಟ್ಟುಗಳನ್ನು ಕೊಟ್ಟಿರೆ ಉಪಯೋಗವಾಗುವುದಿಲ್ಲವೆ ?

ಶ್ರೀ ಕೆ. ಮಲ್ಲಪ್ಪ.—ನಾನಾಗಲೇ ಹೇಳಿದೆ ಹೊಸದಾಗಿ ಸ್ಟೇನ್‌ಲೆಸ್ ಸ್ಟೀಲೂ ಕೊಡುವುದಕ್ಕೆ ಆಗುವುದಿಲ್ಲ ಎಂದು. ಅಲ್ಲದೆ ರಾ ಮೆಟೀರಿಯಲ್ ಸಿಗುವುದು ಬಹಳ ಕಡಿಮೆ ಇದೆ. ಬೇರೆ ವಸ್ತುಗಳನ್ನು ಅವರು ಉಪಯೋಗ ಮಾಡಿಕೊಂಡು ಕೈಗಾರಿಕೆಗಳನ್ನು ಸ್ಥಾಪನೆ ಮಾಡಬೇಕು. ಅವರಿಗೇನು ಪ್ರೊತ್ಸಾಹವನ್ನು ಸರಕಾರ ಕೊಡಬೇಕೋ ಅದನ್ನು ಸರಕಾರ ಕೊಡುತ್ತದೆ.